

ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವವಾಗಿದ್ದು, ವೈವಿಧ್ಯಮಯ ಕಲೆಗಳ ಆರಾಧನೆ ನಡೆಯುವ ಅತಿ ದೊಡ್ಡ ವೇದಿಕೆಯಾಗಿ ಮಾರ್ಪಾಡಾಗಿದೆ.

ಕಲಾವಿದರ ಬದುಕಿಗೆ ಆಸರೆಯಾಗುವ, ಅವರ ಕಲೆಯ ಅನಾವರಣಕ್ಕೆ ವೇದಿಕೆಯಾಗುವ ಈ ಕಾರ್ಯಕ್ರಮದಲ್ಲಿ ಅಂತರಾಷ್ಟ್ರೀಯ ಖ್ಯಾತಿಯ ಕಲಾವಿದರೊಬ್ಬರು 1,00,000 ಮೊತ್ತದ 'ಆಳ್ವಾಸ್ ವಿರಾಸತ್' ಪ್ರಶಸ್ತಿಗೆ ಪ್ರತಿವರ್ಷವೂ ಭಾಜನರಾಗುತ್ತಿದ್ದಾರೆ. ಈಗಾಗಲೇ ಪದ್ಮಭೂಷಣ ಸೋನಾಲ್ ಮಾನ್‌ಸಿಂಗ್, ಪದ್ಮಶ್ರೀ ಝುಕೀರ್ ಹುಸೇನ್, ಪಂಡಿತ್ ಹರಿಪ್ರಸಾದ್ ಚೌರಾಸಿಯ, ಪದ್ಮಶ್ರೀ ಕದ್ರಿ ಗೋಪಾಲನಾಥ್, ಪದ್ಮವಿಭೂಷಣ ಬಾಲಮುರಳೀಕೃಷ್ಣ, ಪದ್ಮಭೂಷಣ ಕೆ.ಜೆ.ಜೇಸುದಾಸ್, ಪದ್ಮಶ್ರೀ ಅಜೋರ್ಯ ಚಕ್ರವರ್ತಿ, ಪದ್ಮಭೂಷಣ ಡಾ.ಪದ್ಮಾ ಸುಬ್ರಹ್ಮಣ್ಯಂ, ಪದ್ಮಶ್ರೀ ಪದ್ಮಭೂಷಣ ಡಾ.ತೀಜನ್ ಬಾ, ಪದ್ಮವಿಭೂಷಣ ಉಸ್ತಾದ್ ಅಮ್ಜದ್ ಆಲಿಖಾನ್, ಪದ್ಮಶ್ರೀ ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಿ ಪಿ ಧನಂಜಯನ್ ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇದೇ ಸಂದರ್ಭದಲ್ಲಿ 'ಆಳ್ವಾಸ್ ವರ್ಣವಿರಾಸತ್ ' ಎಂಬ ಚಿತ್ರಕಲೆ–ಶಿಲ್ಪಕಲೆಗಳ ರಚನೆ–ಪ್ರದರ್ಶನಗಳ ಶಿಬಿರವನ್ನು ಏರ್ಪಡಿಸಲಾಗುತ್ತಿದೆ. ವೃತ್ತಿ ಕಲಾವಿದರಿಂದ ತೊಡಗಿ ರಾಷ್ಟ್ರೀಯ ಅಂತರಾಷ್ಟ್ರೀಯ ಖ್ಯಾತಿಯ ಕಲಾವಿದರು ಈ ಶಿಬಿರಗಳಲ್ಲಿ ಪಾಲ್ಗೊಂಡು ತಮ್ಮ ಕೈಚಳಕ, ಪ್ರತಿಭೆಗಳನ್ನು ಅನಾವರಣಗೊಳಿಸುತ್ತಿದ್ದಾರೆ. ಇಲ್ಲಿಯೂ ಶ್ರೇಷ್ಠ ಕಲಾವಿದರೊಬ್ಬರನ್ನು 25,000 ನಗದಿನೊಂದಿಗೆ ಆಳ್ವಾಸ್ ವರ್ಣವಿರಾಸತ್ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

## ಆಳ್ವಾಸ್ ವಿಶ್ವನುಡಿಸಿರಿ ವಿರಾಸತ್

ಆಳ್ವಾಸ್ ವಿರಾಸತ್‌ಗೆ 20 ವರ್ಷ, ಆಳ್ವಾಸ್ ನುಡಿಸಿರಿಗೆ 10 ವರ್ಷಗಳ ಸಂಭ್ರಮವನ್ನು ಆಳ್ವಾಸ್ ವಿಶ್ವನುಡಿಸಿರಿ ವಿರಾಸತ್ ಎಂಬ ಹೆಸರಿನಲ್ಲಿ ಅದ್ದೂರಿಯಾಗಿ ನೆರವೇರಿಸಲಾಗಿದೆ. 2013ರಲ್ಲಿ ನಡೆದ ಈ ಅಭೂತಪೂರ್ವ ಸಂಗಮದಲ್ಲಿ ಕನ್ನಡಕ್ಕಾಗಿ ದುಡಿಯುತ್ತಿರುವ ವಿಶ್ವದ ಮಹನೀಯರನ್ನು ಕಲೆ ಹಾಕಿ ಗೌರವಿಸುವ ಮೂಲಕ ಸಮ್ಮೇಳನವನ್ನು ಅರ್ಥಪೂರ್ಣ ಮಾಡಲಾಯಿತು. ಅರ್ಹರಾಗಿಯೇ ಅದರ ಅಧ್ಯಕ್ಷತೆಯ ಗೌರವಕ್ಕೆ ಪಾತ್ರರಾದವರು ಬಹುಭಾಷಾ ವಿದ್ವಾಂಸ ಜರ್ಮನಿಯ ವ್ಯೂರ್ತ್ಸ್‌ಬರ್ಗ್ ವಿಶ್ವವಿದ್ಯಾನಿಲಯದ ಸಂದರ್ಶಕ ಪ್ರಾಧ್ಯಾಪಕ ಡಾ.ಬಿ.ವಿ.ವಿವೇಕ ರೈಯವರು. ಅವರ ಮಾರ್ಗದರ್ಶನದಲ್ಲಿ ನಡೆದ ಈ ಸಮ್ಮೇಳನದ ಯಶಸ್ಸು ಸೀಮಾತೀತವಾದುದು.

## ಸಾಂಸ್ಕೃತಿಕ ಅನನ್ಯತೆ

ಸಾಂಸ್ಕೃತಿಕ ಸಂಗತಿಗಳು ಶಿಕ್ಷಣದ ಪ್ರಧಾನ ಭಾಗವೆಂಬ ಭಾವನೆ ಆಳ್ವಾಸ್‌ನದ್ದು. ಹೀಗಾಗಿ ನಿತ್ಯವೂ ಕಲಾಯಜ್ಞ ಆಳ್ವಾಸ್‌ನಲ್ಲಿ ನಡೆಯುತ್ತದೆ. ಸಂಸ್ಕೃತಿಯ, ಪರಂಪರೆಯ ಶ್ರೀಮಂತಿಕೆಯನ್ನು ಸಾರುವ ಕೆಲಸವನ್ನು 'ಆಳ್ವಾಸ್ ಲಲಿತ ಕಲೆಗಳ ಅಧ್ಯಯನ ಕೇಂದ್ರ', 'ಆಳ್ವಾಸ್ ರಂಗ ಅಧ್ಯಯನ ಕೇಂದ್ರ', 'ಆಳ್ವಾಸ್ ಧೀಂಕಿಟ ಯಕ್ಷಗಾನ ಅಧ್ಯಯನ ಕೇಂದ್ರ'ಗಳು ಮಾಡುತ್ತಿವೆ. ಕಲೆಯ ಸತ್ವದರ್ಶನವನ್ನು ವಿದ್ಯಾರ್ಥಿಗಳಿಗೆ, ಯುವ ಜನತೆಗೆ ಮಾಡಿಸುವುದು ಸಂಸ್ಥೆಯ ಆಶಯ. 'ಮಲ್ಲಕಂಬ' ದಂಥ ದೇಸೀ ಕಲೆಗಳಿಗೆ ವಿಭಿನ್ನ ಆಯಾಮವನ್ನು ಕಲ್ಪಿಸಿ, ಕಲೆಗಳ ಔನ್ನತ್ಯೀಕರಣದ ಜೊತೆಗೆ, ಸಾಂಸ್ಕೃತಿಕ ಅನುಸಂಧಾನವನ್ನು ಸಾಧಿಸಲಾಗಿದೆ. ಆಳ್ವಾಸ್‌ನ ಪ್ರತಿಭಾನ್ವಿತ ವಿದ್ಯಾರ್ಥಿಗಳು ನಡೆಸಿಕೊಡುವ 'ಆಳ್ವಾಸ್ ಸಾಂಸ್ಕೃತಿಕ ವೈಭವ' ದೇಶ–ವಿದೇಶಗಳಲ್ಲಿ ನೂರಾರು ಪ್ರದರ್ಶನಗಳನ್ನು ಕಂಡು ಬಹು ಬೇಡಿಕೆಯ ಸಾಂಸ್ಕೃತಿಕ ತಂಡವಾಗಿ ಹೊರಹೊಮ್ಮಿದೆ. ಆಳ್ವಾಸ್ ರಂಗ ಅಧ್ಯಯನ ಕೇಂದ್ರ ಸತತ 9 ಬಾರಿ ರಾಷ್ಟ್ರೀಯ ರಂಗ ಪ್ರಶಸ್ತಿಯನ್ನು ಪಡೆದಿರುವುದಷ್ಟೇ ಅಲ್ಲ : ಅದರ ರಂಗಪ್ರಯೋಗಗಳು ಜನಮನ್ನಣೆಯನ್ನು ಗಳಿಸಿವೆ. ಧೀಂಕಿಟ ಯಕ್ಷಗಾನ ಅಧ್ಯಯನ ಕೇಂದ್ರವು ಬಡಗು ಮತ್ತು ತೆಂಕು ತಿಟ್ಟಿನ ಹೊಸ ಹೊಸ ಪ್ರಯೋಗಗಳಿಗೆ ನಾಂದಿ ಹಾಡಿದೆ. ಇವೆಲ್ಲವು ಆಳ್ವಾಸ್‌ನ ಸಾಂಸ್ಕೃತಿಕ ಅನನ್ಯತೆಯನ್ನು ಸಾರುತ್ತವೆ.

ವಿದ್ಯೆ ಎಂದರೆ ಕೇವಲ ಅಕ್ಷರಗಳ ಕಲಿಕೆಯಲ್ಲ; ಬದಲಾಗಿ ಜೀವನ ಮೌಲ್ಯಗಳ, ಸಂಸ್ಕೃತಿ ಪರಂಪರೆಯನ್ನು ಅರ್ಥೈಸಿಕೊಳ್ಳುವ ಒಂದು ಬಹುದೊಡ್ಡ ಪ್ರಕ್ರಿಯೆ. ಈ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳಿಗೆ ಅಕ್ಷರ ಕಲಿಕೆಯ ಜೊತೆ ಭಾಷೆ–ಸಂಸ್ಕೃತಿ–ಪರಂಪರೆ–ಸಂಪ್ರದಾಯ–ಆಚಾರ–ವಿಚಾರಗಳನ್ನು ಪರಿಚಯಿಸುವ ಪ್ರಯತ್ನವಾಗಬೇಕಿರುವುದು ಅತ್ಯಂತ ಮುಖ್ಯ. ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಇಂತಹ ವಿದ್ಯಾದಾನ ಮಾಡುತ್ತಿರುವ ಕರ್ನಾಟಕದ ಹೆಮ್ಮೆಯ ಸಂಸ್ಥೆಯಾಗಿದೆ. ಡಾ. ಎಂ. ಮೋಹನ್ ಆಳ್ವರು ಈ ಸಂಪೂರ್ಣ ಪ್ರಕ್ರಿಯೆಯನ್ನು ವಿವರಿಸುವುದು ಹೀಗೆ: "ನಮ್ಮ ಸಂಸ್ಥೆಯಲ್ಲಿ ದಿನನಿತ್ಯ ನಡೆಯುವ ಸಾಂಸ್ಕೃತಿಕ ಚಟುವಟಿಕೆಗಳು, ಆಚರಣೆಗಳು ದೇವಸ್ಥಾನದಲ್ಲಿ ನಿಯಮಿತವಾಗಿ ನಡೆಯುವ ಪೂಜೆಯಿದ್ದಂತೆ. ವರ್ಷಕ್ಕೊಮ್ಮೆ ಬರುವ ನುಡಿಸಿರಿ–ವಿರಾಸತ್‌ಗಳು ದೇವಾಲಯದ ವಾರ್ಷಿಕ ಉತ್ಸವಗಳಂತೆ. ಇನ್ನು ಐದು–ಹತ್ತು ವರ್ಷಗಳಿಗೊಮ್ಮೆ ನಡೆಯುವ ವಿಶ್ವನುಡಿಸಿರಿ– ವಿರಾಸತ್‌ಗಳು ದೇವಾಲಯದಲ್ಲಿ 12 ವರ್ಷಗಳಿಗೊಮ್ಮೆ ನಡೆಯುವ ಬ್ರಹ್ಮಕಲಶೋತ್ಸವವಿದ್ದಂತೆ. ಪೂಜೆ ಪುನಸ್ಕಾರಗಳು ಹೇಗೆ ನಿರಂತರವೋ ಹಾಗೇ ನಮ್ಮಲ್ಲಿ ಸಂಸ್ಕೃತಿಯನ್ನು ಉಳಿಸುವ ಕಾರ್ಯಗಳು ನಿರಂತರವಾಗಿರುತ್ತವೆ." ಇದು ಒಬ್ಬ ಕಲಾತಪಸ್ವಿಯಿಂದ ಮಾತ್ರ ಬರುವ ಮಾತು.